**Akashvani : Bangalore**
**National Bulletin In Kannada**
**13.07.2024 / 19.35 hrs**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**13.07.2024 19.35 hrs**

**<><*<><>*><>**

ಮುಖ್ಯಾಂಶಗಳು

೧. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಂದ ಮಹಾರಾಷ್ಟ್ರದಲ್ಲಿಂದು ಸುಮಾರು ೨೯ ಸಾವಿರ ಕೋಟಿ ರೂಪಾಯಿ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಿಲಾನ್ಯಾಸ -ಉದ್ಘಾಟನೆ

೨. ೨೦೨೪-೨೫ನೇ ಸಾಲಿನಲ್ಲಿ ಇದುವರೆಗೆ ನಿವ್ವಳ ನೇರ ತೆರಿಗೆ ಸಂಗ್ರಹದಲ್ಲಿ ಶೇಕಡ ೨೦ರ ಬೆಳವಣಿಗೆ

೩. ಪ್ರಾದೇಶಿಕ ಭಾಷೆಗಳಲ್ಲಿ ಕಾನೂನು ಶಿಕ್ಷಣ; ಭಾರತದ ವರಿಷ್ಠ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಪ್ರತಿಪಾದನೆ

೪. ದೇಶದ ಗಡಿ ಗ್ರಾಮಗಳ ಸರ್ವಾಂಗೀಣ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಬದ್ಧ - ಗೃಹ ಸಚಿವ ಅಮಿತ್ ಶಾ

೫. ಟಿ-೨೦ ಕ್ರಿಕೆಟ್; ನಾಲ್ಕನೇ ಪಂದ್ಯದಲ್ಲಿ ಜಿಂಬಾಬ್ವೆ ವಿರುದ್ಧ ಭಾರತಕ್ಕೆ ೧೦ ವಿಕೆಟ್‌ಗಳ ಭರ್ಜರಿ ಗೆಲುವು- ಸರಣಿ ಜಯ

**<><*<><>*><>**

ಪ್ರಧಾನಮಂತ್ರಿ ನರೇಂದ್ರ ಮೋದಿ, ಮಹಾರಾಷ್ಟ್ರದ ಸುಮಾರು ೨೯ ಸಾವಿರದ ೪೦೦ ಕೋಟಿ ರೂಪಾಯಿ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಇಂದು ಶಿಲಾನ್ಯಾಸ ಹಾಗೂ ಉದ್ಘಾಟನೆ ನೆರವೇರಿಸಿದರು. ಥಾಣೆ-ಬೊರಿವಲಿ ನಡುವಿನ ದೂರವನ್ನು ೧೨ ಕಿಲೋಮೀಟರ್‌ಗಳಷ್ಟು ಕಡಿಮೆಗೊಳಿಸುವ ಹಾಗೂ ಸಂಚಾರ ಅವಧಿಯನ್ನು ಸುಮಾರು ೧ ಗಂಟೆಯಷ್ಟು ತಗ್ಗಿಸುವ ೧೬ ಸಾವಿರದ ೬೦೦ ಕೋಟಿ ರೂಪಾಯಿ ವೆಚ್ಚದ ಸುರಂಗ ಯೋಜನೆಗೆ ಪ್ರಧಾನಿಯವರು ಶಿಲಾನ್ಯಾಸ ನೆರವೇರಿಸಿದರು. ಇದಲ್ಲದೆ, ಉಪನಗರ ಸಂಚಾರ ದಟ್ಟಣೆಯನ್ನು ಕಡಿಮೆಗೊಳಿಸುವ ೬ ಸಾವಿರದ ೩೦೦ ಕೋಟಿ ರೂಪಾಯಿ ವೆಚ್ಚದ ಗೋರೆಗಾಂವ್ ಮುಲುಂದು ಸಂಪರ್ಕ ರಸ್ತೆ ಯೋಜನೆಯ ಸುರಂಗ ಕಾಮಗಾರಿಗೂ ಶಂಕುಸ್ಥಾಪನೆ ನೆರವೇರಿಸಿದರು. ಛತ್ರಪತಿ ಶಿವಾಜಿ ರೈಲ್ವೆ ನಿಲ್ದಾಣದ ವಿಸ್ತೃತ ತಂಗುದಾಣ ವೇದಿಕೆಯನ್ನು ಪ್ರಧಾನಮಂತ್ರಿಯವರು ದೇಶದ ಸೇವೆಗೆ ಸಮರ್ಪಿಸಿದರು. ಯುವ ಜನರಲ್ಲಿ ಕೌಶಲ್ಯ ಹೆಚ್ಚಿಸುವ ಹಾಗೂ ಉದ್ಯೋಗಕ್ಕಾಗಿ ತರಬೇತಿ ನೀಡುವ ೫ ಸಾವಿರದ ೬೦೦ ಕೋಟಿ ರೂಪಾಯಿ ಗಾತ್ರದ ಮುಖ್ಯಮಂತ್ರಿ ಯುವ ಕಾರ್ಯ ಪ್ರಶಿಕ್ಷಣ ಯೋಜನೆಗೂ ಪ್ರಧಾನಿ ನರೇಂದ್ರ ಮೋದಿ ಚಾಲನೆ ನೀಡಿದರು.

**<><*<><>*><>**

ಆದಾಯ ತೆರಿಗೆ ಇಲಾಖೆ, ೨೦೨೪-೨೫ ನೇ ಹಣಕಾಸು ಸಾಲಿಗಾಗಿ ಈ ತಿಂಗಳ ೧೧ರವರೆಗೆ ೬ ಲಕ್ಷದ ೪೫ ಸಾವಿರ ಕೋಟಿ ರೂಪಾಯಿಗೂ ಅಧಿಕ ನೇರ ತೆರಿಗೆ ಸಂಗ್ರಹಿಸಿದೆ. ಇದಲ್ಲz, ೭೦ ಸಾವಿರದ ೯೦೨ ಕೋಟಿ ರೂಪಾಯಿ ರೀಫಂಡ್ ಮಾಡಿದೆ. ನೇರ ತೆರಿಗೆ ಸಂಗ್ರಹದಲ್ಲಿ ಕಾರ್ಪೊರೇಟ್ ಕ್ಷೇತ್ರದ ೨ ಲಕ್ಷ ೬೫ ಸಾವಿರದ ೩೩೬ ಕೋಟಿ ರೂಪಾಯಿ, ವೈಯಕ್ತಿಕ ತೆರಿಗೆಯ ೩ ಲಕ್ಷ ೬೧ ಸಾವಿರದ ೮೬೨ ಕೋಟಿ ರೂಪಾಯಿ ಹಾಗೂ ಇತರ ತೆರಿಗೆಗಳ ೧ ಸಾವಿರದ ೪೨೬ ಕೋಟಿ ರೂಪಾಯಿ ಸೇರಿದೆ. ನಿವ್ವಳ ನೇರ ತೆರಿಗೆ ಸಂಗ್ರಹದಲ್ಲಿ ಶೇಕಡ ೨೦ರಷ್ಟು ಗಮನಾರ್ಹ ಬೆಳವಣಿಗೆ ಅಂದರೆ, ೫ ಲಕ್ಷದ ೭೪ ಸಾವಿರ ಕೋಟಿ ರೂಪಾಯಷ್ಟು ಹೆಚ್ಚು ತೆರಿಗೆ ಸಂಗ್ರಹಿಸಲಾಗಿದೆ.

**<><*<><>*><>**

ಕಾನೂನು ಕುರಿತ ಶಿಕ್ಷಣವನ್ನು ಪ್ರಾದೇಶಿಕ ಭಾಷೆಗಳಲ್ಲಿ ನೀಡುವ ಅಗತ್ಯವಿದೆ ಎಂದು ಭಾರತದ ಮುಖ್ಯ ನ್ಯಾಯಾಧೀಶ, ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ ಪ್ರತಿಪಾದಿಸಿದ್ದಾರೆ. ಅವರು, ಲಖನೌದಲ್ಲಿಂದು ಡಾ.ರಾಮ್ ಮನೋಹರ್

ಲೋಹಿಯಾ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದ ಘಟಿಕೋತ್ಸವ ಸಮಾರಂಭದಲ್ಲಿ ಮಾತನಾಡಿ, ವಿಶ್ವವಿದ್ಯಾಲಯಗಳಲ್ಲಿ ಪ್ರಾದೇಶಿಕ ವಿಚಾರಗಳಿಗೆ ಸಂಬಂಧಿಸಿದ ಕಾನೂನುಗಳ ಬಗ್ಗೆಯೂ ಕೂಡ ಶಿಕ್ಷಣ ನೀಡಬೇಕು ಎಂದು ಹೇಳಿದರು. ಜನಸಾಮಾನ್ಯರಿಗೆ ನ್ಯಾಯಪ್ರಕ್ರಿಯೆ ಹೆಚ್ಚು ಲಭ್ಯವಾಗುವಂತೆ ಮಾಡಲು ಅನೇಕ ಸೂಚನೆಗಳನ್ನು ನೀಡಿರುವುದಾಗಿ ತಿಳಿಸಿದ ವರಿಷ್ಠ ನ್ಯಾಯಮೂರ್ತಿಗಳು, ಸುಪ್ರೀಂಕೋರ್ಟ್‌ನ ನಿರ್ಣಯಗಳನ್ನು ಜನಸಾಮಾನ್ಯರು ತಿಳಿದುಕೊಳ್ಳುವಂತೆ ಮಾಡಲು ಸಂವಿಧಾನದಿಂದ ಮನ್ನಣೆ ಪಡೆದಿರುವ ವಿವಿಧ ಪ್ರಾದೇಶಿಕ ಭಾಷೆಗಳಿಗೆ ಅನುವಾದಿಸಲಾಗುತ್ತಿದೆ ಎಂದು ತಿಳಿಸಿದರು.

<><*<><>*><>

ಭಾರತ, ನವೆಂಬರ್ ತಿಂಗಳಲ್ಲಿ 'ವಿಶ್ವ ಶ್ರಾವ್ಯ ದೃಶ್ಯ ಮನರಂಜನಾ ಶೃಂಗಸಭೆ- ವೇವ್ಸ್' ಆಯೋಜಿಸಿದೆ. ನವೆಂಬರ್ ೨೦ ರಿಂದ ೨೪ರವರೆಗೆ ಗೋವಾದಲ್ಲಿ ಮೊದಲ ವೇವ್ಸ್ ಶೃಂಗಸಭೆ ನಡೆಯಲಿದೆ. ಕೇಂದ್ರ ಮತ್ತು ವಾರ್ತಾ ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್ ಅವರು, ನವದೆಹಲಿಯಲ್ಲಿಂದು ನಡೆದ ಸಿದ್ಧತಾಸಭೆಯಲ್ಲಿ ಮಾತನಾಡಿ, ಭಾರತದ ಮನರಂಜನಾ ಉದ್ದಿಮೆ ಬೆಳವಣಿಗೆಯಲ್ಲಿ ವೇವ್ಸ್ ಗಮನಾರ್ಹ ಮೈಲುಗಲ್ಲಾಗಿದೆ. ಇದು ಹೆಚ್ಚು ಉದ್ಯೋಗ ಸೃಷ್ಟಿಸುವುದಲ್ಲದೇ, ಮಾಧ್ಯಮ ಮತ್ತು ಮನಂರಜನಾ ಕ್ಷೇತ್ರಗಳಲ್ಲಿ ವಿನ್ಯಾಸಾತ್ಮಕ ಬದಲಾವಣೆ ತರಲಿದೆ ಎಂದರು. ವಾರ್ತಾ ಮತ್ತು ಪ್ರಸಾರ ಖಾತೆ ರಾಜ್ಯ ಸಚಿವ ಡಾ.ಎಲ್.ಮುರುಗನ್, ಈ ಶೃಂಗಸಭೆ ಕೌಶಲ್ಯಯುತ ಜನಸಂಪನ್ಮೂಲಕ್ಕೆ ಪ್ರೋತ್ಸಾಹ ನೀಡುವ ವೇದಿಕೆಯಾಗಿದೆ ಎಂದರು. ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಮಾತನಾಡಿ, ಭಾರತ ವಿಶ್ವದಲ್ಲೇ ಅತಿ ಹೆಚ್ಚು ಚಲನಚಿತ್ರಗಳನ್ನು ನಿರ್ಮಿಸುತ್ತಿರುವ ದೇಶಗಳಲ್ಲಿ ಒಂದಾಗಿದೆ. ಈ ನಿಟ್ಟಿನಲ್ಲಿ ವೇವ್ಸ್ ಆಯೋಜನೆ ಮಹತ್ವದ ಪಾತ್ರ ನಿರ್ವಹಿಸಲಿದೆ ಎಂದರು.

<><*<><>*><>

ಯುವ ಜನತೆಯಲ್ಲಿ ತಾಂತ್ರಿಕ ಕೌಶಲ್ಯವನ್ನು ವರ್ಧಿಸುವ ಉದ್ದೇಶದ ಡಿಡಿ ರೋಬೊಕಾನ್ ಇಂಡಿಯಾ-೨೦೨೪ ಸ್ಪರ್ಧೆಗಳು ದೆಹಲಿಯಲ್ಲಿಂದು ಆರಂಭವಾಗಿವೆ. ಪ್ರಸಾರ ಭಾರತಿ ಮತ್ತು ದೆಹಲಿಯ ಐಐಟಿ ಸಂಸ್ಥೆ, ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಲಾಗಿರುವ ಎರಡು ದಿನಗಳ ಈ ಕಾರ್ಯಕ್ರಮದಲ್ಲಿ ವಿವಿಧ ವಿಶ್ವವಿದ್ಯಾಲಯ ಹಾಗೂ ಸಂಸ್ಥೆಗಳ ೭೫೦ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದಾರೆ. ಈ ಸ್ಪರ್ಧೆಗಳಲ್ಲಿ ವಿಜೇತವಾಗುವ ತಂಡಗಳು, ವಿಯಟ್ನಾಂನಲ್ಲಿ ನಡೆಯಲಿರುವ ಅಂತಾರಾಷ್ಟ್ರೀಯ ಏಷ್ಯಾ ಪೆಸಿಫಿಕ್ ಬ್ರಾಡ್‌ಕಾಸ್ಟಿಂಗ್ ಯುನಿಯನ್ ರೋಬೊಕಾನ್ ಸ್ಪರ್ಧೆಯಲ್ಲಿ ಭಾರತವನ್ನು ಪ್ರತಿನಿಧಿಸಲಿವೆ.

<><*<><>*><>

ದೇಶದ ಗಡಿ ಗ್ರಾಮಗಳ ಸರ್ವಾಂಗೀಣ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಬದ್ಧವಾಗಿದೆ ಎಂದು ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ಅವರು, ದೆಹಲಿಯಲ್ಲಿಂದು ಸ್ಪಂದನಶೀಲ ಯೋಜನೆ 'ವೈಬ್ರೆಂಟ್ ವಿಲೇಜಸ್' ಕಾರ್ಯಕ್ರಮ ಜಾರಿಯ ಉನ್ನತಮಟ್ಟದ ಪರಿಶೀಲನಾ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು. ಗಡಿ ಗ್ರಾಮಗಳಲ್ಲಿ ಸ್ಥಳೀಯರಿಗೆ ಉದ್ಯೋಗಾವಕಾಶ ಹೆಚ್ಚಿಸುವ ಅವಶ್ಯತೆಯಿದೆ. ಇದಲ್ಲದೆ, ವಲಸೆ ತಡೆಗಟ್ಟಲು ಸಂಪರ್ಕ ಸೌಲಭ್ಯ ಹೆಚ್ಚಿಸಬೇಕಾಗಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಇದಕ್ಕೆ ಬದ್ಧವಾಗಿದೆ ಎಂದು ಹೇಳಿದರು. ಗಡಿ ಹಳ್ಳಿಗಳಲ್ಲಿ ನಿಯೋಜಿತವಾಗಿರುವ ಕೇಂದ್ರೀಯ ಶಸಸ್ತ್ರ ಪೊಲೀಸ್ ಪಡೆ ಮತ್ತು ಸೇನಾ ಇಲಾಖೆ ಸಹಕಾರಿಗಳ ಮೂಲಕ ಸ್ಥಳೀಯ ಕೃಷಿ ಹಾಗೂ ಕರಕುಶಲ ವಸ್ತುಗಳನ್ನು ಖರೀದಿಸಲು ಪ್ರೋತ್ಸಾಹ ನೀಡಬೇಕು. ಸೇನೆ ಹಾಗೂ ಪೊಲೀಸ್ ಪಡೆಗಳಿಗೆ ದೊರಕುತ್ತಿರುವ ಆರೋಗ್ಯ ರಕ್ಷಣೆ ಸೌಲಭ್ಯವನ್ನು ಸ್ಥಳೀಯ ಗ್ರಾಮಸ್ಥರು ಕೂಡ ಪಡೆಯುವಂತಾಗಬೇಕು ಎಂದು ಅಮಿತ್ ಶಾ ಸೂಚಿಸಿದರು. ಕೇಂದ್ರ ಪ್ರಾಯೋಜಿತ 'ವೈಬ್ರೆಂಟ್ ವಿಲೇಜಸ್' ಕಾರ್ಯಕ್ರಮದಡಿ ೧೩೬ ಗಡಿ ಹಳ್ಳಿಗಳಿಗೆ ೨ ಸಾವಿರದ ೪೨೦ ಕೋಟಿ ರೂಪಾಯಿ ವೆಚ್ಚದಲ್ಲಿ ೧೧೩ ಸರ್ವಋತು ರಸ್ತೆ ಸಂಪರ್ಕ ಕಲ್ಪಿಸಲಾಗುತ್ತಿದೆ. ಈ ಗ್ರಾಮಗಳಿಗೆ ಇಂಡಿಯಾ ಪೋಸ್ಟ್ ಪೇಮೆಂಟ್ ಬ್ಯಾಂಕ್ ಮೂಲಕ ಹಣಕಾಸು ಒಳಗೊಳ್ಳುವಿಕೆ ಸೌಲಭ್ಯ ಒದಗಿಸಲಾಗುತ್ತಿದೆ.

<><*<><>*><>

ಏಳು ರಾಜ್ಯಗಳ ೧೩ ವಿಧಾನಸಭಾ ಕ್ಷೇತ್ರಗಳಿಗೆ ನಡೆದ ಉಪ ಚುನಾವಣೆಯ ಮತ ಎಣಿಕೆ ಕಾರ್ಯ ಇಂದು ನಡೆದಿದ್ದು, ಇದುವರೆಗೆ ೭ ಕ್ಷೇತ್ರಗಳ ಫಲಿತಾಂಶ ಲಭ್ಯವಾಗಿದೆ. ಜಲಂದರ್ ಪಶ್ಚಿಮ ಮೀಸಲು ಕ್ಷೇತ್ರದಲ್ಲಿ ಆಮ್‌ಆದ್ಮಿ ಪಕ್ಷ, ಹಿಮಾಚಲ ಪ್ರದೇಶದ ಮೂರು ಕ್ಷೇತ್ರಗಳ ಪೈಕಿ ೨ ರಲ್ಲಿ ಕಾಂಗ್ರೆಸ್ ಮತ್ತು ೧ ಸ್ಥಾನದಲ್ಲಿ ಬಿಜೆಪಿ ಜಯಗಳಿಸಿವೆ. ಪಶ್ಚಿಮ ಬಂಗಾಳದ ರಣಘಾಟ್ ದಕ್ಷಿಣ ಕ್ಷೇತ್ರ, ರಾಯ್‌ಗಂಜ್ ಮತ್ತು ಬಾಗ್ದದಲ್ಲಿ ತೃಣಮೂಲ ಕಾಂಗ್ರೆಸ್ ವಿಜಯ ಸಾಧಿಸಿದೆ.

<><*<><>*><>

ನೇಪಾಳದ ಪ್ರಧಾನಮಂತ್ರಿ ಪುಷ್ಪ ಕಮಲ್ ದಹಲ್ ಪ್ರಚಂಡ, ಪ್ರಜಾಪ್ರತಿನಿಧಿಗಳ ಸದನದಲ್ಲಿ ವಿಶ್ವಾಸಮತ ಸಾಬೀತುಪಡಿಸುವಲ್ಲಿ ವಿಫಲರಾಗಿದ್ದಾರೆ. ೨೦೨೨ರ ಡಿಸೆಂಬರ್ ೨೫ ರಂದು ಅಧಿಕಾರ ವಹಿಸಿಕೊಂಡ ನಂತರ ಸದನದಲ್ಲಿ ಸತತ ನಾಲ್ಕು ಬಾರಿ ವಿಶ್ವಾಸ ಮತಯಾಚನೆ ಗಳಿಸುವಲ್ಲಿ ಅವರು ಯಶಸ್ವಿಯಾಗಿದ್ದರು. ನಿನ್ನೆ ನಡೆದ ಐದನೇ ವಿಶ್ವಾಸ ಮತಯಾಚನೆ ಪ್ರಸ್ತಾಪದಲ್ಲಿ ಪ್ರಚಂಡ ಅಗತ್ಯವಿದ್ದ ೧೩೮ ಮತಗಳ ಬದಲಿಗೆ ೬೩ ಮತಗಳನ್ನು ಮಾತ್ರ ಪಡೆದರು. ಇದರೊಂದಿಗೆ ಅವರ ೧೮ ತಿಂಗಳ ಅಧಿಕಾರ ಅವಧಿ ಮುಗಿದಂತಾಗಿದೆ. ಪ್ರಚಂಡ ವಿರುದ್ಧ ೧೯೪ ಮತಗಳು ಬಿದ್ದಿವೆ. ನೇಪಾಳದ ಕೆಳಮನೆ ಒಟ್ಟು ೨೭೫ ಸದಸ್ಯರನ್ನು ಹೊಂದಿದ್ದು, ಈ ಪೈಕಿ ೨೫೮ ಸದಸ್ಯರು ಮತಚಲಾವಣೆ ಸಂದರ್ಭದಲ್ಲಿ ಹಾಜರಿದ್ದರು. ಈ ಮಧ್ಯೆ ನೇಪಾಳಿ ಕಾಂಗ್ರೆಸ್‌ನ ಅಧ್ಯಕ್ಷ ಶೇರ್ ಬಹದ್ದೂರ್ ದೇವ್ಬ ಮತ್ತು ಯುಎಂಎಲ್ ಅಧ್ಯಕ್ಷ ಕೆ.ಪಿ.ಶರ್ಮಾ ಓಲಿ, ೧೬೫ ಸದಸ್ಯರ ಸಹಿ ಇರುವ ಮನವಿಯನ್ನು ರಾಷ್ಟ್ರಪತಿಯವರಿಗೆ ಸಲ್ಲಿಸಿದ್ದು, ಓಲಿ ಅವರನ್ನು ಪ್ರಧಾನಮಂತ್ರಿಯನ್ನಾಗಿ ನೇಮಕ ಮಾಡಲು ಕೋರಲಾಗಿದೆ. ರಾಷ್ಟ್ರಪತಿ ಪೌಡೆಲ್ ಅವರು, ಓಲಿ ಪ್ರಧಾನಮಂತ್ರಿಯಾಗಬೇಕು ಎಂದು ಬೆಂಬಲ ಸೂಚಿಸುವ ಸದಸ್ಯರು, ನಾಳೆ ಸಂಜೆ ೫ ಗಂಟೆ ಒಳಗಡೆ ತಮ್ಮ ಮುಂದೆ ಹಾಜರಾಗಬೇಕು ಎಂದು ಸೂಚಿಸಿದ್ದಾರೆ.

<><*<><>*><>

ಇಂಡೋನೇಷ್ಯಾದ ಮಧ್ಯ ಜಾವಾದಲ್ಲಿ ಇಂದು ಸಂಭವಿಸಿದ ರಸ್ತೆ ಅಪಘಾತದಲ್ಲಿ ಕನಿಷ್ಠ ೬ ಜನ ಮೃತಪಟ್ಟಿದ್ದಾರೆ. ಇತರ ೧೪ ಮಂದಿ ಗಾಯಗೊಂಡಿದ್ದಾರೆ. ೨೨ ಪ್ರಯಾಣಿಕರನ್ನು ಕರೆದೊಯ್ಯುತ್ತಿದ್ದ ಮಿನಿ ಬಸ್ ಅಪಘಾತಕೀಡಾಗಿದ್ದು, ಗಾಯಗೊಂಡವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

<><*<><>*><>

ಕಾರ್ಗಿಲ್ ವಿಜಯ ದಿವಸದ ರಜತ ಜಯಂತಿ ಪ್ರಾಸ್ತವಿಕ ಕಾರ್ಯಕ್ರಮ ಲಡಾಖ್‌ನಲ್ಲಿಂದು ನಡೆಯಿತು. ಈ ಸಂದರ್ಭದಲ್ಲಿ ಸೇನಾಪಡೆ, ಸೇನಾ ಶಸ್ತ್ರಾಸ್ತ್ರ ಉಪಕರಣ ಪ್ರದರ್ಶನ ಏರ್ಪಡಿಸಿತ್ತು. ಮೇಜರ್ ಜನರಲ್ ಸಚಿನ್ ಮಲ್ಲಿಕ್ ಹಾಗೂ ಬ್ರಿಗೇಡಿಯರ್ ಪ್ರತೀಕ್ ಕಾರ್ಯಕ್ರಮದ ನೇತೃತ್ವ ವಹಿಸಿದ್ದರು. ವಿವಿಧ ಶಾಲಾ-ಕಾಲೇಜು ಮಕ್ಕಳು ಸೇನೆಪಡೆಯ ಆಕರ್ಷಕ ಸಂವಾದನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

<><*<><>*><>

ಗೋವಾ, ಮಧ್ಯ ಮಹಾರಾಷ್ಟ್ರ, ಗುಜರಾತ್, ಕೇರಳ ಮತ್ತು ಕರ್ನಾಟಕದ ದಕ್ಷಿಣ ಒಳನಾಡು ಪ್ರದೇಶಗಳ ಕೆಲವೆಡೆ ಮುಂದಿನ ಐದು ದಿನಗಳಲ್ಲಿ ಭಾರೀಯಿಂದ ಅತಿ ಭಾರೀ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ತೆಲಂಗಾಣ, ಮಧ್ಯಪ್ರದೇಶ, ವಿದರ್ಭ, ಛತ್ತೀಸ್‌ಗಢಗಳಲ್ಲಿ ಭಾರೀ ಮಳೆಯಾಗುವ ಸಂಭವ. ಮುಂಬೈ ಮತ್ತು ಥಾಣೆ ನಗರಗಳಿಗೆ ರೆಡ್ ಅಲರ್ಟ್ ಘೋಷಿಸಲಾಗಿದೆ. ಪಾಲ್ಘರ್, ರಾಯ್‌ಗಢ್, ರತ್ನಗಿರಿ ಮತ್ತು ಸಿಂಧೂದುರ್ಗಾ ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ನೀಡಲಾಗಿದೆ.

<><*<><>*><>

ಹರಾರೆಯಲ್ಲಿ ನಡೆಯುತ್ತಿರುವ ಭಾರತ-ಜಿಂಬಾಬ್ವೆ ನಡುವಿನ ಐದು ಪಂದ್ಯಗಳ ಟಿ-೨೦ ಕ್ರಿಕೆಟ್ ಸರಣಿಯ ನಾಲ್ಕನೇ ಪಂದ್ಯದಲ್ಲಿ ಜಿಂಬಾಬ್ವೆ ವಿರುದ್ಧ ಭಾರತ ೧೦ ವಿಕೆಟ್‌ಗಳ ಭರ್ಜರಿ ಗೆಲುವು ಸಾಧಿಸಿದ್ದು, ಸರಣಿಯನ್ನು ತನ್ನದಾಗಿಸಿಕೊಂಡಿದೆ. ಟಾಸ್ ಸೋತು ಮೊದಲ ಬ್ಯಾಟಿಂಗ್ ಮಾಡಿದ ಜಿಂಬಾಬ್ವೆ ನಿಗದಿತ ೨೦ ಓವರ್‌ಗಳಲ್ಲಿ ೭ ವಿಕೆಟ್ ನಷ್ಟಕ್ಕೆ ೧೫೨ ರನ್ ಮಾಡಿತು. ಗುರಿ ಬೆನ್ನತ್ತಿದ ಭಾರತ, ೧೫.೨ ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ ೧೫೬ ರನ್ ಮಾಡಿತು. ಭಾರತದ ಪರ ಯಶಸ್ವಿ ಜೈಸ್ವಾಲ್ ೫೩ ಎಸೆತಗಳಲ್ಲಿ ಅಜೇಯ ೯೩ ರನ್ ಪಡೆದರೆ, ನಾಯಕ ಶುಭ್‌ಮನ್‌ಗಿಲ್ ೩೯ ಎಸೆತಗಳಲ್ಲಿ ಅಜೇಯ ೫೮ ರನ್ ಗಳಿಸಿದರು. ಇದುವರೆಗಿನ ನಾಲ್ಕು ಪಂದ್ಯಗಳಲ್ಲಿ ಭಾರತ ೩ ಪಂದ್ಯಗಳನ್ನು ಗೆದ್ದಿದ್ದು, ೧ ಪಂದ್ಯ ಜಿಂಬಾಬ್ವೆ ಪರವಾಗಿದೆ. ಈ ಸರಣಿಯ ಐದನೇ ಹಾಗೂ ಅಂತಿಮ ಪಂದ್ಯ ನಾಳೆ ನಡೆಯಲಿದೆ. ಪಂದ್ಯ ಭಾರತೀಯ ಕಾಲಮಾನ ಸಂಜೆ ೪.೩೦ ಕ್ಕೆ ಆರಂಭವಾಗಲಿದೆ.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>

<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ <>*><>